| |
|---|
| **Deposition Sheets (RP.No.57)**<br>**Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 661/2022**

ಪಿ.ಡಬ್ಲ್ಯು ಃ 9 ಸಿ.ಡಬ್ಲ್ಯು ಃ 14

ಸಾಕ್ಷಿದಾರನ ಹೆಸರು ಃ ಜೀವಂದರ್ ಹೆಗ್ಡೆ
ತಂದೆಯ ಹೆಸರು ಃ ಭೋಜರಾಜ ಶೆಟ್ಟಿ
ಪ್ರಾಯ ಃ 63 ವರ್ಷ
ಉದ್ಯೋಗ ಃ ಮ್ಯಾನೇಜಿಂಗ್ ಡೈರೆಕ್ಟರ್, ಟಿ.ಎ.ಪಿ.ಸಿ.ಎಮ್.ಎಸ್. ಕಾರ್ಕಳ
ವಾಸ ಃ ಕಾರ್ಕಳ

ದಿನಾಂಕ 09-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2011 ರಿಂದ ಕಾರ್ಕಳದ ಟಿ.ಎ.ಪಿ.ಸಿ.ಎಮ್.ಎಸ್ ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದ ಆರೋಪಿ ಪ್ರಶಾಂತ್ ಆಚಾರ್ಯ ರವರು 2013 ರಲ್ಲಿ ನಮ್ಮ ಸಂಸ್ಥೆಯಲ್ಲಿ ರೂ 4,50,000/- ವನ್ನು ಕಾರು ಖರೀದಿಸಲು ಸಾಲ ಮಾಡಿರುತ್ತಾರೆ. ದಿಃ 03-01-2021 ರಂದು ಕಾರ್ಕಳ ನಗರ ಠಾಣೆಯ ಪಿ.ಎಸ್.ಐ ರವರು ಪತ್ರ ಮುಖೇನ ಪ್ರಶಾಂತ್ ಆಚಾರ್ಯ ರವರ ಸಾಲದ ಅರ್ಜಿ, ಬಾಡಿಗೆ ಖರೀದಿ ಕರಾರು, ಸಾಲ ನೀಡಿದ ಬಗ್ಗೆ ಇನ್ವಾಯಿಸ್, ತಾತ್ಕಾಲಿಕ ನೊಂದಣಿ ಸಂಖ್ಯೆ ಹಾಗೂ ಇತರ ದಾಖಲೆಗಳ ಮಾಹಿತಿ ಕೋರಿ ಪತ್ರ ಬರೆದಿದ್ದು, ಅದರಂತೆ ನಾನು ನಮ್ಮ ಸಂಸ್ಥೆಯಲ್ಲಿ ಇದ್ದ ದಾಖಲೆಗಳ ಪ್ರತಿಗಳನ್ನು ಕಾರ್ಕಳ ನಗರ ಠಾಣೆಯ ಪಿ.ಎಸ್.ಐ ರವರಿಗೆ ನೀಡಿರುತ್ತೇನೆ. ಈ ಕುರಿತು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿರುತ್ತೇನೆ.

ಸಾಕ್ಷಿಯು ಪೋಲಿಸರಿಗೆ ಒದಗಿಸಿದ ಟ್ಯಾಕ್ಸ್ ಇನ್ವಾಯಿಸ್, ಬಾಡಿಗೆ ಕರಾರು (ಹೈಯರ್ ಪರ್ಚೇಸ್), ಬಾಡಿಗೆ ಖರೀದಿ ಕರಾರು, ವಾಹನ ಖರೀದಿ ರಶೀದಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-9 ರಿಂದ 12 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-9(ಎ) ಯಿಂದ ನಿಪಿ12(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> : ಆರೋಪಿತರ ಪರ : ಶ್ರೀಮತಿ ಕೆ.ಎಸ್. ವಕೀಲರಿಂದ ::

ಪೋಲಿಸರ ಕೋರಿಕೆಯ ಮೇರೆಗೆ ನಿಪಿ-9 ರಿಂದ 12 ದಾಖಲೆಗಳನ್ನು ಕೊಟ್ಟಿರುತ್ತೇನೆ. ಅದಕ್ಕೆ ಪೂರಕವಾಗಿ ನನ್ನ ಹೇಳಿಕೆಯನ್ನು ಬೆರಳಚ್ಚು ಮಾಡಿಸಿಕೊಂಡಿರುತ್ತಾರೆ. ಕಾರಿಗೆ ನೀಡಿದ ಸಾಲ ಆರೋಪಿ ಸಂಪೂರ್ಣವಾಗಿ ಮರುಪಾವತಿ ಮಾಡಿರುತ್ತಾರೆ. ಆರೋಪಿತನ ವಿರುದ್ಧ ನಾನು ಯಾವುದೇ ಪ್ರಕಣ ದಾಖಲಿಸಿರುವುದಿಲ್ಲ. ಪೋಲಿಸರು ಹೇಳಿದ ನಂತರ ಆರೋಪಿ ನಕಲಿ ನಂಬರ್ ಪ್ಲೇಟ್ ಹಾಕಿ, ವಾಹನ ಚಲಾಯಿಸುತ್ತಿದ್ದರು ಎಂದು ಗೊತ್ತಾಗಿರುತ್ತದೆ. ಪೋಲಿಸರು ಹೇಳಿಕೊಟ್ಟಂತೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ :: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ